# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ

## ಹಿರೇಕೆರೂರು

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 8

**ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರುಃ - ಮಲ್ಲಿಕಾರ್ಜುನ

ತಂದೆಯ ಹೆಸರು - ಶಿವಾನಂದಪ್ಪ ಜಕ್ಕಪ್ಪನವರ

ವಯಸ್ಸುಃ - 30 ವರ್ಷ

ಉದ್ಯೋಗ - ಚಾಲಕರು

ವಾಸಸ್ಥಳ - ದೂದಿಹಳ್ಳಿ

ದಿನಾಂಕಃ 15-09-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ-1 ರವರು ನಮ್ಮ ಗ್ರಾಮದವರು. ದಿಃ 09-04-2021 ರಂದು ಬೆಳಿಗ್ಗೆ 6-15 ರ ಸುಮಾರಿಗೆ ನಾನು ಹಾಗೂ ಚಾಸಾ-1 ರವರು ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರವ ವಿಚಾರ ತಿಳಿದು ಬಂದಿರುತ್ತದೆ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ.

**ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಅಪಘಾತವಾದ ಸ್ಥಳದಲ್ಲಿ ಇಬ್ಬರು ಕೈ ಸನ್ನೆ ಮಾಡಿ ನಮ್ಮ ವಾಹನವನ್ನು ನಿಲ್ಲಿಸಿ, ಅಪಘಾತ ಪಡಿಸಿದ ಲಾರಿಯ ಹಿಂದೆ ಎಸ್. ಎನ್. ಎಂದು ಬರೆದಿದ್ದು, ಹೋಗಿ ನೋಡಿ ಎಂದು ತಿಳಿಸಿದ್ದು, ನಾವು ಹಿರೇಕೆರೂರು ಎ.ಪಿ.ಎಂ.ಸಿ. ಬಳಿ ಬಂದಾಗ ಒಂದು ಲಾರಿ ಮಾಸೂರು ಕಡೆಗೆ ಮುಖ ಮಾಡಿ ನಿಂತು ಕೊಂಡಿದ್ದು, ಅದನ್ನು ನೋಡಿ ಚಾಸಾ-9 ರವರು ಎಡ ಗಾಲಿಯ ಮೇಲೆ ರಕ್ತದ ಕಲೆ ಇದ್ದು, ಅದನ್ನು ನಾವು ಚಾಸಾ-6 ರವರಿಗೆ ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಲಾರಿಯಲ್ಲಿದ್ದ ವ್ಯಕ್ತಿಯ ಹೆಸರು ತೌಸಿಪ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ಲಾರಿ ನಂಃ ಕೆ.ಎ.20/ಸಿ-7129 ಎಂದರೆ ಸರಿಯಲ್ಲ. ಈ ಸಂಬಂಧ ದಿಃ 09-04-2021 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಒಪ್ಪಿಕೊಳ್ಳದ ಹೇಳಿಕೆಯನ್ನು **ನಿಪಿ-15** ಎಂದು ಗುರುತಿಸಲಾಯಿತು.

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 8

**ಪಿ.ಡಬ್ಲ್ಯೂಃ 5**

**ಪಾಟೀ ಸವಾಲುಃ ಇಲ್ಲ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 15-09-2025

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು